# ವಿಡಿಐಟಿ ವಿದ್ಯಾರ್ಥಿಗಳಿಂದ ಪೇಟೆಂಟ್ ನೋಂದಣಿ

»ಜನಮಾಧ್ಯಮ, ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಪೇಟೆಂಟ್ ದಾಖಲು ಮಾಡಿದ್ದಾರೆ. ಮೆಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕರಾದ ಡಾ. ಶೈಲೇಶ್ ಚನ್ನಪಟ್ಟಣ, ಪ್ರೊ.ಭರತ್ ಕುಮಾರ್ ಪಾಟೀಲ್ ಅವರೊಂದಿಗೆ ವಿದ್ಯಾರ್ಥಿಗಳಾದ ಸಹನಾ ಬಿ, ಪುರಂದರ ಎಂ, ಚಿರಾಗ್ ಎನ್, ಸಮ್ಮೀರ್ ಕೆ 'ಸೌರಶಕ್ತಿಯಿಂದ ಉತ್ಪತ್ತಿಯಾದ ಶಾಖವನ್ನು ಸಂಗ್ರಹಿಸುವ ತಂತ್ರಜ್ಞಾನ' ಕುರಿತಾಗಿ ಪೇಟೆಂಟ್ ದಾಖಲಿಸಿದ್ದಾರೆ. ಹಂತ ಬದಲಾವಣೆ ಪದಾರ್ಥಗಳು ಹಾಗೂ ಸಂವೇದಿ ಶಾಖ ಸಂಗ್ರಹಗಳ ಮೂಲಕ ಸೌರ ಸ್ಟಿಲ್ ವಿನ್ಯಾಸದ ಕುರಿತಾಗಿ ಈ ಪೇಟೆಂಟ್ ದಾಖಲಾಗಿದೆ. 02-03-2023 ರಂದು ಪೇಟೆಂಟ್ ಅರ್ಜಿ ಸಲ್ಲಿಸಲಾಗಿತ್ತು. 06-09-2024 ರಂದು ಪೇಟೆಂಟ್ ದಾಖಲಾಗಿ ಪ್ರಕಟಿಸಲ್ಪಟ್ಟಿದೆ.

ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪೇಟೆಂಟ್ ದಾಖಲಿಸಿರುವುದಕ್ಕೆ ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ್ ಲೋಕುರ್, ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹರ್ಷ ವ್ಯಕ್ತ ಪಡಿಸಿದ್ದಾರೆ.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ್ ಬಿ, ಸಂಶೋಧನಾ ಡೀನ್ ಡಾ. ಶ್ರೀನಿವಾಸ್ ಸರದೇಶಪಾಂಡೆ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

Main Edition Edition
Sep 17, 2024 Page No. 3
Powered by: erelego.com